ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಖಾಯಂಗುತ್ತಾ ಕೆಂಪಗೊಂಡನಹಳ್ಳಿ ಗ್ರಾಮವು 10—7—1903ರಲ್ಲಿಯೂ ಖಾಯಂಗುತ್ತಾ ಗಂಗಪ್ಪನಹಳ್ಳಿ ಗ್ರಾಮವು 11—7—1903 ರಲ್ಲಿ ಯೂ ಆಯಾಯ ಗ್ರಾಮಗಳ ಚಾವಡಿಗಳಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 1903ನೇ ಜೂ೯ 11ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದಲ್ಲಿ ಘಾಯಿಷ್ ಆಗಿ ಇದೆ.

ಹೆಚ್. ಹೆಚ್. ಸ್ಪಿರ್ಟ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 22ನೇ ಮೇ 1903.

ಮಾಲೂರು ತಾಲ್ಲೂಕು ತ್ಯಾಕಲ್ ಹೋಬಳಿಗೆ ಶೇರಿದ ಮಾರ್ಜಿನ್ನಲ್ಲಿ ನಮೂದಾಗುವ ಗ್ರಾಮಗಳ ಬಳಿ ಇರತಕ್ಕ ಬಂಡೆ ಮೇಲೆ ಕಲ್ಲು ತೆಗೆಯಲು ಕೋಳ್ಳಕೃತು ಸಂವತ್ಸರಕ್ಕೆ (1903–1904) ಅಂದರೆ 1903ನೇ ಜುಲೈ 1ನೇ ತಾರೀಖು ಲಾಗಾಯತು 1904ನೇ ಜೂ೯ ಆಖೈರು ವರಿಗೆ ಕಲ್ಲು ತೆಗಿಯುವದಕ್ಕೋಸ್ಕರ 1903ನೇ ಇಸವಿ ಜೂ೯ 30ನೇ ತಾರೀಖಿನಲ್ಲಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಈ ಬಾಬನ್ನು ಹರಾಜು ಹಾಕಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

1. ತ್ಯಾಕಲ್	4. ಕೊರಚನೂರು
2. ಕಾವಲಗಿರಿಯನಹಳ್ಳಿ	5. ಹುಣಸಕೋಟೆ
3. ಕೊಂಡರಾಜನಹಳ್ಳಿ	6. ವುಳ್ಳೇರಹಳ್ಳಿ

ಹೆಚ್ಚು ತಪಶೀಲ್ ಬಗ್ಯೆ 1903ನೇ ಇಸವಿ ಜೂ೯ ತಾರೀಖು 4ನೇ ಮತ್ತು೦ 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260—261ನೇ ನಂಬರ್ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ನರಸಾಪುರದ ಹೋಬಳಿಗೆ ಸೇರಿದ ಕಾಯಂಗುತ್ತಾ ಗರುಡನಪಾಳ್ಯ ಗ್ರಾಮವು ಸರಕಾರಕ್ಕೆ ಬರಬೇಕಾದ ಗುತ್ತಾ ಬಾಕೀಗೋಸ್ಕರವಾಗಿ ಮಾಲೂರು ತಾಲ್ಲೂಕು ಆಮಿಲರವರ ಕಛೇರಿಯಲ್ಲಿ 1903ನೇ ಇಸವಿ ಜುಲೈ 10ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1903ನೇ ಇಸವಿ ಜೂ೯ ತಾರೀಖು 4ನೇ ಮತ್ತು೦ 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260–261ನೇ ನಂಬರು ಪೇಜು ನೋಡತಕ್ಕದ್ದು.

ಇಸ್ತಿಹಾರನಾಮೆ.

ತಾರೀಖು 1ನೇ ಜೂ೯ 1903.

ಮಾಲೂರು ತಾಲ್ಲೂಕಿಗೆ ಶೇರಿದ ಮಾರ್ಜಿನ್ನಲ್ಲಿ ಕಂಡ ಇನಾಂ ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಮಾಲೂರು ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಜುಲೈ ತಾರೀಖು 20ನ್ನು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ನಲ್ಲಪ್ಪನಹಳ್ಳಿ.	1. ,, ಜೊಕ್ಕಪುರ.
1. ,, ಬೆಳ್ಳೂರು.	1. ಕಾಯಂಗುತ್ತಾ ಬೈರಸಂದ್ರ.

ಹೆಚ್ಚು ತಪಸೀಲ್ ಬಗ್ಯೆ 1903ನೇ ಜೂ೯ ತಾರೀಖು 11ನೇ ಮಾರ್ಚು೦ 23ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 274–275–276–277ನೇ ನಂಬರ್ ಪೇಜುಗಳು ನೋಡತಕ್ಕದ್ದು.

ಇದರಿಂದ ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲ ಸಮ್ಮತು ಬೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲೆಗಳ ನೀರಿನಿಂದ ಸಾಗುವಳಿಯಾಗುತ್ತಿದ್ದ ತರಿ ಮತ್ತು ಬಾಗಾಯತು ಜಮೀನ್ ಕಂದಾಯದಾರರಿಗೆ ತಿಳಿಯಪಡಿಸುವದೇನಂದರೆ.—ಕೋಲಾರ ಗೋಲ್ಡ್ ಫೀಲ್ಡ್‌ನಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ನೀರನ್ನ ಸಾಗುವಳಿಗೆ ಬಿಡದೆ "Conserve" ಯಾನೆ ಅಮಾನತ್ತು ಮಾಡಬ್ಯೇಕೆಂತ ವಗ್ಯೆರೆ ಆಗಿರುವ ಗವರ್ನಮೆಂಟ್ ತೀರ್ಮಾನವನ್ನನುಸರಿಸಿ 1903ನೇ ಇಸವಿ ಮಾರ್ಚಿ 15ನೇ ತಾರೀಖು ಲಾಗಾಯತು ಸದರಿ ಕೆರೆ ಮತ್ತು ನಾಲಾಗಳ ನೀರನ್ನ ಸಾಗುವಳಿಗೆ ಕೊಡಲಾಗಲಾರದೆಂಬ ಸಂಗತಿಯನ್ನ ಸಂಬಂಧಪಟ್ಟ ಎಲ್ಲಾ ರೈತರಿಗೂ ಮೊದಲೇ ಪ್ರಸಿದ್ಧಪಡಿಸಿರುತ್ತಷ್ಟೆ.

ಹಾಲಿ ಮುಂಗಾರು ಮಳೆ ಬಿದ್ದು ಫಸಲಿಡಲಿಕ್ಕೆ ಆಯಾಂಕಾಲವಾಗಿರುವದ್ದರಿಂದ ಬೇತಮಂಗಲ ಕೆರೆ ಮತ್ತು ಅದರ ನಾಲೆಗಳ ನೀರಿನಿಂದ ಸಾಗುವಳಿಯಾಗುತ್ತಿದ್ದ ತಮಾಂ ತರಿ ಮತ್ತು ಬಾಗಾಯತು ಜಮೀನ್ ಮಾಲೀಕರುಗಳು ತಮ್ಮ ತಮ್ಮ ಜಮೀನುಗಳಲ್ಲಿ ತಮಗೆ ಇಷ್ಟಬಂದ ಯಾವ ಐ೯ ಖುಷ್ಕಿ ಬೆಳೆಯನ್ನಾದರೂ ಇಟ್ಟುಕೊಳ್ಳಬಹುದು. ಸರ್ಕಾರದವರ ಅಡ್ಡಿ ಇಲ್ಲವೆಂಬ ಸಂಗತಿ ಪುನಹ ತಿಳಿಸಿರುತ್ತೆ.

ಮತ್ತು ಬೇತಮಂಗಲದಿಂದ ರಾಮಸಾಗರಕಡೆಗೆ ಹರಿಯುವ ಕೋಡಿ, ಕ್ಷೀರನದಿ, ವ ಇತರ ಯಾವ ಸರ್ಕಾರ ನೀರನ್ನೇ ಆಗಲಿ ಬೇಕಾಗಿರುವ ಕಂದಾಯದಾರರು ತಮ್ಮ ಜಮೀನುಗಳಿಗೆ ಉಪಯೋಗಿಸಿಕೊಳ್ಳಲು ಮತ್ತು ತಮ್ಮ ತಮ್ಮ ಜಮೀನುಗಳಲ್ಲಿ ಭಾವಿ ತೆಗಿಯಬೇಕೆಂಬ ಇರಾದೆಯುಳ್ಳವರು ಕಛೇರಿಯವರು ದರಖಾಸ್ತು ಕೊಟ್ಟು ನಮ್ಮಿಂದ ಲಿಖಿತಮೂಲಕವಾದ ಅಪ್ಪಣೆಯನ್ನ ಪಡೆದನಂತರವೇ ಸಾಗುವಳಿ ಬಗ್ಯೆ ಸದರೀ ನೀರನ್ನ ತೆಗೆದುಕೊಳ್ಳಬಹುದಾಗಿರುತ್ತೆ.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೇ ಮಾಹೆ 1903.

1. ಕಂದಾಯದ ಬಾಕೀದಾರರಾದ ಜೋಡಿದಾರ್ ನಂಜುಂಡೈಯ್ಯ ವಗೈರೇರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀ ಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ತುಮಕೂರ ಡಿಸ್ಟ್ರಿಕ್ಟು ತುಮಕೂರ ತಾಲ್ಲೂಕು ಜೋಡಿ ವಡ್ಡರಹಳ್ಳಿ ಗ್ರಾಮದಲ್ಲಿ 1903ನೇ ಇಸವಿ ಆಗಸ್ಟು 3ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿ[illegible] ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901–1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 64—0—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಕೇಕಡಾ 25ರೂಪಾಯಿಯಂತೆ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕ್ಸಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ [illegible]ರ್ವಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನಾರಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಿಸಿದವರ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಹಿಸ್ಸಾ ನಂಬರ್ ಅಥವಾ ಜಮೀನಿನ ಹೆಸರು.	ಮುಸ್ಕಿಲ್ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರಕಾರಕ್ಕೆ ಬರಬೇಕಾದ ಸೊ ಟ್ಟಿನಲ್ಲಿ ಸರ್ಕಾರದ ಸಂಬಂಧವಾದ ಬಾಕಿ ಮೊಬಲಗು.
					ರೂ. ಆ. ಪೈ.		ಖು. ಕೊ. ಪಡಿ.	ರೂ.	ಆ.	ಪೈ.
ತುಮಕೂರು	ತುಮಕೂರು	ಜೋಡಿ ವಡ್ಡರಹಳ್ಳಿ	ನಂಜುಂಡೈಯ್ಯ ವೈಶ್ಯರ	...	..	ಖುಷ್ಕಿ	9—15— 4	150	0	0
						ತರಿ	0— 3— 0			
						ಪರಂಪೋಕು	7—17—11 7/8			
							17—15—15 7/8			

ಪ್ಲವ ಸಂವತ್ಸರದ ಬಗೆ (1901—02)
ರೂ. ಆ. ಪೈ.
63—0—9
1—0—0
64—0—[illegible]

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.